

ಜಗತ್ತು ಕಂಡ ಅದ್ಭುತ ವ್ಯಕ್ತಿ


SUFFAH

SUFFAH PUBLICATIONS

Krishnapura, Suratkal, Mangalore - 575014

8722695551 / 9008662269

ಈ ಲೇಖನದ ಮುದ್ರಿತ ಪ್ರತಿಗಾಗಿ ಸಂಪರ್ಕಿಸಿ



SUFFAH PUBLICATIONS

Skyway Complex, 6th Block, Krishnapura,
Suratkal, Mangalore - 575 014

8722695551 / 9008662269


ಜಗತ್ತು ಕಂಡ ಅದ್ಭುತ ವ್ಯಕ್ತಿ


ಮೋಸೆಸ್, ಯೇಸು, ಝುರತುಷ್ಟ್ರ, ಅಬ್ರಹಾಂ ಮುಂತಾದ ಅನೇಕ ಧಾರ್ಮಿಕ ನಾಯಕರ ಅಸ್ತಿತ್ವ ಹಾಗೂ ಬೋಧನೆಗಳ ಬಗ್ಗೆ ಇತಿಹಾಸವು ದಾಖಲಿಸಿದೆ. ಮಾನವಕುಲಕ್ಕೆ ಮಾರ್ಗದರ್ಶಿಯಾಗಿ ದೈವಿಕ ಸಂದೇಶಗಳನ್ನು ತಂದಿದ್ದೇವೆಂದು ವಾದಿಸಿದ ಅನೇಕ ನಕಲಿ ಪ್ರವಾದಿಗಳು ಮತ್ತು ದೇವಮಾನವರ ಬಗ್ಗೆಯೂ ಇತಿಹಾಸ ಬೆಳಕು ಚೆಲ್ಲುತ್ತದೆ.



ಆದರೆ ಇವರೆಲ್ಲರ ಮಧ್ಯೆ, ಅನಕ್ಷರಸ್ಥರಾಗಿದ್ದರೂ ದೇವ ಸಂದೇಶಗಳನ್ನು ಮಾನವಕುಲಕ್ಕೆ ವಿಶ್ವಾ-ಸಾರ್ಹವಾಗಿ ತಲುಪಿಸಿ, ಮಾನವ ಇತಿಹಾಸದಲ್ಲಿ ಅಭೂತಪೂರ್ವ ಪರಿವರ್ತನೆಯನ್ನು ದಾಖಲಿಸಿದ ಒಬ್ಬ ವ್ಯಕ್ತಿಯ ಬಗ್ಗೆ ಹೆಚ್ಚಿನವರಿಗೂ ತಿಳಿದಿಲ್ಲ.

'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ' ಆ ವ್ಯಕ್ತಿಯ-ನ್ನು ಹೀಗೆ ವರ್ಣಿಸುತ್ತದೆ: "ಸರ್ವ ಪ್ರವಾದಿಗಳಲ್ಲಿ ಮತ್ತು ಧಾರ್ಮಿಕ ವ್ಯಕ್ತಿತ್ವಗಳಲ್ಲಿ ಅತ್ಯಂತ ಯಶ-ಸ್ವಿಯಾದವರು." "ಅವರು ಪ್ರಾಮಾಣಿಕ ಮತ್ತು ಸರಳ ಜನರ ಗೌರವ ಹಾಗೂ ವಿಶ್ವಾಸವನ್ನು ಗೆದ್ದ, ಅತ್ಯಂತ ಪ್ರಾಮಾಣಿಕ ಮತ್ತು ಸರಳ ವ್ಯಕ್ತಿಯಾಗಿದ್ದ-ರೆಂದು ಪ್ರಾಥಮಿಕ ಮೂಲಗಳಲ್ಲಿರುವ ಹೇರಳ ವಿ-ವರಣೆಗಳು ತೋರಿಸುತ್ತವೆ." (Encyclopedia Britannica vol. 12)





ಜಾರ್ಜ್ ಬರ್ನಾರ್ಡ್ ಶಾ ಹೇಳುತ್ತಾರೆ: “ಅವರನ್ನು ಮಾನವೀಯತೆಯ ರಕ್ಷಕರೆಂದೇ ಕರೆಯಬೇಕು. ಅವರಂತಹ ಒಬ್ಬ ವ್ಯಕ್ತಿ ಆಧುನಿಕ ಜಗತ್ತಿನ ಸರ್ವಾ-ಧಿಕಾರವನ್ನು ವಹಿಸಿಕೊಂಡರೆ, ಜಗತ್ತಿಗೆ ಅತ್ಯಂತ ಅಗತ್ಯವಿರುವ ಶಾಂತಿ ಮತ್ತು ಸಂತೋಷವನ್ನು ತರುವಂತಹ ರೀತಿಯಲ್ಲಿ ಅದರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಅವರು ಯಶಸ್ವಿಯಾಗುವ-ರೆಂದು ನಾನು ನಂಬುತ್ತೇನೆ.” (The Genuine Islam, Singapore, Vol. 1, No. X 1936)

ಅವರು ಈ ಭೂಮಿಯ ಮೇಲೆ ಬಾಳಿ ಬದುಕಿದ ಅತಿ ಗಮನಾರ್ಹ ವ್ಯಕ್ತಿಯಾಗಿದ್ದರು. ಅವರು ಒಂದು ಧರ್ಮವನ್ನು ಪ್ರಚಾರ ಮಾಡಿದರು, ಒಂದು ರಾಜ್ಯಕ್ಕೆ ಬುನಾದಿ ಹಾಕಿದರು, ಒಂದು ರಾಷ್ಟ್ರವನ್ನು ನಿರ್ಮಿ-ಸಿದರು, ನ್ಯಾಯ-ನೀತಿಯ ನಿಯಮಗಳನ್ನಿಟ್ಟರು, ಹಲವಾರು ಸಾಮಾಜಿಕ-ರಾಜಕೀಯ ಸುಧಾರ-ಣೆಗಳನ್ನು ಜಾರಿಗೆ ತಂದರು. ಅಷ್ಟೇ ಅಲ್ಲದೆ, ತಮ್ಮ

ಬೋಧನೆಗಳನ್ನು ಕಾರ್ಯರೂಪಕ್ಕಿಳಿಸಲು ಮತ್ತು ಇತರರಿಗೆ ತಲುಪಿಸಲು ಒಂದು ಶಕ್ತ ಮತ್ತು ಕ್ರಿಯಾ-ತ್ಮಕ ಸಮಾಜವನ್ನು ಸ್ಥಾಪಿಸಿದರು. ಮಾನವ ವಿಚಾರ-ಗಳ ಮತ್ತು ವರ್ತನೆಗಳ ಜಗತ್ತನ್ನು ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ ಕ್ರಾಂತೀಕರಿಸಿದರು.

ಅವರೇ ಮನುಷ್ಯ ಇತಿಹಾಸ ಕಂಡ ಅತಿಶ್ರೇಷ್ಠ ಮಾನವತಾವಾದಿ, ಜಗತ್ತು ಕಂಡ ಅದ್ಭುತ ವ್ಯಕ್ತಿ — ಪ್ರವಾದಿ ಮುಹಮ್ಮದ್(ಸ).

ಕ್ರಿ.ಶ. 570ರಲ್ಲಿ ಅರೇಬಿಯಾದಲ್ಲಿ ಜನಿಸಿದ ಮು-ಹಮ್ಮದ್(ಸ) ರವರು, ತಮ್ಮ 40ನೇ ವಯಸ್ಸಿನಲ್ಲಿ ಇಸ್ಲಾಮ್ (ಏಕ ದೇವನಿಗೆ ಸಂಪೂರ್ಣ ಶರಣಾ-ಗತಿ) ಎಂಬ ಸತ್ಯಧರ್ಮದ ಪ್ರಚಾರ ಕಾರ್ಯವನ್ನು ಆರಂಭಿಸಿ, ತಮ್ಮ 63ನೇ ವಯಸ್ಸಿನಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದರು.

ಮುಹಮ್ಮದ್(ಸ) ರವರು ಕೇವಲ 23 ವರ್ಷಗಳ ತಮ್ಮ ಸಂದೇಶ ಪ್ರಚಾರದ ಅತಿಸಂಕ್ಷಿಪ್ತ ಅವಧಿ-ಯಲ್ಲಿ, ಸಂಪೂರ್ಣ ಅರೇಬಿಯನ್ ಪರ್ಯಾಯ ದ್ವೀಪವನ್ನು ಬಹುದೇವಾರಾಧನೆ, ಮೂಢನಂಬಿಕೆ ಮತ್ತು ಸೃಷ್ಟಿಪೂಜೆಯಿಂದ ಏಕದೇವಾರಾಧನೆಯೆ-ಡೆಗೆ; ಜನಾಂಗೀಯ ಕಲಹ ಮತ್ತು ಯುದ್ಧಗಳಿಂದ ರಾಷ್ಟ್ರೀಯ ಒಗ್ಗಟ್ಟು ಮತ್ತು ಭಾವೈಕ್ಯತೆಯೆಡೆಗೆ; ಮದ್ಯಪಾನ ಮತ್ತು ವ್ಯಭಿಚಾರದಿಂದ ಸಮಚಿತ್ತತೆ



ಮತ್ತು ದೇವಭಕ್ತಿಯೆಡೆಗೆ; ಅವ್ಯವಸ್ಥೆ ಮತ್ತು ಅರಾಜಕತೆಯಿಂದ ಶಿಸ್ತುಬದ್ಧ ಮತ್ತು ಮಾದರಿಯೋಗ್ಯ ಬದುಕಿನೆಡೆಗೆ; ಪರಿಪೂರ್ಣ ದಿವಾಳಿತನದಿಂದ ನೈತಿಕ ಉತ್ಕೃಷ್ಟತೆಯ ಪರಾಕಾಷ್ಠೆಯೆಡೆಗೆ ಸಂಪೂರ್ಣವಾಗಿ ಪರಿವರ್ತಿಸಿದರು. ಇದು ಮಾನವ ಚರಿತ್ರೆಯು ಎಂದೂ ಕಂಡಿರದ ಅಥವಾ ಕೇಳಿರದ ಇಂತಹ ಅಭೂತಪೂರ್ವ ಮತ್ತು ಆಮೂಲಾಗ್ರ ಬದಲಾವಣೆ! ಊಹಿಸಿ ನೋಡಿ, ನಂಬಲಸಾಧ್ಯವಾದ ಈ ಅದ್ಭುತಗಳೆಲ್ಲವೂ ನಡೆದದ್ದು ಕೇವಲ ಎರಡು ದಶಕಗಳ ಸಂಕ್ಷಿಪ್ತ ಅವಧಿಯಲ್ಲಿ!

ಸುಪ್ರಸಿದ್ಧ ಇತಿಹಾಸ ತಜ್ಞ ಅಲ್ಫೋನ್ಸೆ ಡಿ ಲಾಮರ್ಟೈನ್, ಮಾನವ ಶ್ರೇಷ್ಠತೆಗಿರುವ ಆವಶ್ಯಕತೆಗಳ ಬಗ್ಗೆ ವಿವರಿಸುತ್ತಾ ಹೀಗೆ ಹೇಳುತ್ತಾರೆ: “ಉದ್ದೇಶದ ಪ್ರಾಧಾನ್ಯತೆ, ಸಾಧನಗಳ ಮಿತತ್ವ ಮತ್ತು ದಿಗಿಲುಗೊಳಿಸುವಂತಹ ಫಲಿತಾಂಶಗಳು— ಈ ಮೂರು ಅಂಶಗಳು ಒಬ್ಬ ವ್ಯಕ್ತಿಯ ಶ್ರೇಷ್ಠತೆಯನ್ನು ಅಳೆಯುವ ಮಾನದಂಡಗಳಾಗಿದ್ದರೆ, ಮುಹಮ್ಮದ್(ಸ) ರೊಡನೆ ಆಧುನಿಕ ಇತಿಹಾಸದ ಯಾವುದೇ ಶ್ರೇಷ್ಠ ವ್ಯಕ್ತಿಯನ್ನು ಹೋಲಿಸಲು ಧೈರ್ಯಪಡುವವರು ಯಾರು? ಅತಿಪ್ರಸಿದ್ಧ ಜನರು ಕೇವಲ ಶಸ್ತ್ರಾಸ್ತ್ರ, ಕಾನೂನು ಮತ್ತು ಸಾಮ್ರಾಜ್ಯಗಳನ್ನು ಮಾತ್ರ ನಿರ್ಮಿಸಿದರು. ಕೊನೆಗೆ ಅವರು ಏನನ್ನಾದರೂ ಸಾಧಿಸಿದ್ದರೆ ಅದು ಅವರ ಕಣ್ಣ ಮುಂದೆಯೇ ನಿರಂತರವಾಗಿ



ಹೊಸಕಿ ಹಾಕಲಾಗುತ್ತಿದ್ದ ಭೌತಿಕ ಅಧಿಕಾರಗಳ-ಲ್ಲದೆ ಇನ್ನೇನೂ ಆಗಿರಲಿಲ್ಲ. ಆದರೆ ಈ ವ್ಯಕ್ತಿ (ಮು-ಹಮ್ಮದ್) ಸೈನ್ಯಗಳನ್ನೂ, ಶಾಸನಗಳನ್ನೂ, ಸಾ-ಮ್ರಾಜ್ಯಗಳನ್ನೂ, ಜನರನ್ನೂ, ರಾಜವಂಶಗಳನ್ನೂ ಮುನ್ನಡೆಸಿದ್ದು ಮಾತ್ರವಲ್ಲದೆ, ಅಂದಿನ ಜಾಗತಿಕ ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟಿದ್ದ ಕೋಟ್ಯಂತರ ಜನರನ್ನು ಮುನ್ನಡೆಸಿದ್ದರು. ಅದ-ಕ್ಕಿಂತ ಮಿಗಿಲಾಗಿ ಅವರು (ಜನರಲ್ಲಿ ಮನೆಮಾಡಿ-ದ್ದ) ಬಲಿಪೀಠಗಳು, ದೇವರುಗಳು, ಧರ್ಮಗಳು, ಪರಿಕಲ್ಪನೆಗಳು, ನಂಬಿಕೆಗಳು ಮತ್ತು ಆತ್ಮಗಳೆಲ್ಲ-ವನ್ನೂ ಬದಲಾಯಿಸಿದರು.

ಗೆದ್ದಾಗ ಅವರಿಗಿದ್ದ ಆತ್ಮಸಂಯಮ, ಅವರ ಮಹ-ತ್ವಾಕಾಂಕ್ಷೆ, ಎಲ್ಲವನ್ನೂ ಸಂಪೂರ್ಣವಾಗಿ ಒಂದೇ ಗುರಿಯತ್ತ ಸಮರ್ಪಿಸಲಾಗಿತ್ತು. ಇದು ಯಾವುದೇ

ರೀತಿಯಲ್ಲೂ ಒಂದು ಸಾಮ್ರಾಜ್ಯ ಸ್ಥಾಪನೆಯತ್ತ ನಡೆಸಿದ ಹೋರಾಟವಾಗಿರಲಿಲ್ಲ. ಅವರ ಕೊನೆಯಿಲ್ಲದ ಪ್ರಾರ್ಥನೆಗಳು, ತಮ್ಮ ದೇವನೊಡನೆ ನಡೆಸುವ ನಿಗೂಢ ಸಂಭಾಷಣೆಗಳು, ಅವರ ಮರಣ ಮತ್ತು ಮರಣಾನಂತರದ ವಿಜಯ— ಇವೆಲ್ಲವೂ ಅವರೊಬ್ಬ ವಿಶೇಷ ವ್ಯಕ್ತಿಯಾಗಲು ಬಯಸಿದ ನಯವಂಚಕನೆಂದು ದೃಢೀಕರಿಸುವುದಿಲ್ಲ. ಬದಲಾಗಿ ಒಂದು ಸಿದ್ಧಾಂತವನ್ನು ರಕ್ಷಿಸುವುದಕ್ಕಾಗಿ ಅವರಿಗೆ ಶಕ್ತಿ ನೀಡುತ್ತಿರುವ ಒಂದು ಬಲಿಷ್ಠವಾದ ವಿಶ್ವಾಸದಾರ್ಢ್ಯತೆ ಅವರಲ್ಲಿತ್ತೆಂದು ದೃಢೀಕರಿಸುತ್ತದೆ. ಈ ಸಿದ್ಧಾಂತವು ಎರಡು ಪ್ರಮುಖ ಅಂಶಗಳನ್ನು ಹೊಂದಿದೆ: ದೇವನ ಏಕತ್ವ ಮತ್ತು ದೇವನ ಅಭೌತಿಕತೆ. ಮೊದಲನೆಯದು ದೇವನು 'ಏನು' ಎನ್ನುವುದನ್ನು ಸೂಚಿಸಿದರೆ, ಎರಡನೆಯದು ದೇವನು 'ಏನು ಅಲ್ಲ' ಎನ್ನುವುದನ್ನು ಸೂಚಿಸುತ್ತದೆ. ಒಂದು ಖಡ್ಗದೊಂದಿಗೆ ಮಿಥ್ಯ ದೇವರುಗಳನ್ನು ಕಿತ್ತೊಗೆಯುವಾಗ, ಇನ್ನೊಂದು ಮಾತುಗಳ ಮೂಲಕ ಚಿಂತನೆಗಳಿಗೆ ಚಾಲನೆ ನೀಡುತ್ತದೆ.

ತತ್ವಜ್ಞಾನಿ, ವಾಗ್ಮಿ, ಧರ್ಮಪ್ರಚಾರಕ, ಶಾಸನಕರ್ತ, ಯೋಧ, ಊಹೆಗಳನ್ನು ದಮನಿಸಿದವನು, ವೈಚಾರಿಕ ಸಿದ್ಧಾಂತಗಳ ಹಾಗೂ ಪ್ರತಿಮೆಗಳಿಲ್ಲದ ಉಪಾಸನಾ ಪದ್ಧತಿಯ ಸಂರಕ್ಷಕ, ಇಪ್ಪತ್ತು ಭೂಸಾಮ್ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ

ಸ್ಥಾಪಕ— ಅವರೇ ಮುಹಮ್ಮದ್(ಸ). ಮನುಷ್ಯ ಶ್ರೇಷ್ಠತೆಯನ್ನು ಅಳೆಯುವ ಸರ್ವ ಮಾನದಂಡ-ಗಳನ್ನು ಬಳಸಿ ಪರಿಶೋಧಿಸಿದ ಬಳಿಕ ಖಂಡಿತ-ವಾಗಿಯೂ ನಾವು ಕೇಳುವೆವು: ಮುಹಮ್ಮದ್(ಸ) ಗಿಂತಲೂ ಶ್ರೇಷ್ಠ ವ್ಯಕ್ತಿ ಯಾರಾದರೂ ಇದ್ದಾರೆಯೇ?" (Lamartine, Historie de la Turquie, Paris, 1854, vol. II, pp. 276-277).

ಈ ಜಗತ್ತು ಎಷ್ಟೋ ಶ್ರೇಷ್ಠ ವ್ಯಕ್ತಿಗಳನ್ನು ಕಂಡಿದೆ. ಆದರೆ ಅವರೆಲ್ಲರೂ ಧಾರ್ಮಿಕ ಚಿಂತನೆ ಅಥವಾ ಸೇನಾ ನಾಯಕತ್ವದಂತಹ ಒಂದೆರಡು ಕ್ಷೇತ್ರಗ-ಳಲ್ಲಿ ಮಾತ್ರ ತಮ್ಮನ್ನು ಗುರುತಿಸಿಕೊಂಡ ಏಕಮು-ಖಿಗಳಾಗಿದ್ದರು. ಜಗತ್ತಿನ ಇಂತಹ ಶ್ರೇಷ್ಠ ವ್ಯಕ್ತಿಗಳ ಜೀವನಶೈಲಿ ಮತ್ತು ಉಪದೇಶಗಳು ಕಾಲಗರ್ಭದ-ಲ್ಲಿ ಮರೆಯಾಗಿ ಹೋಗಿವೆ. ಅವರ ಜನ್ಮ ಸಮಯ ಮತ್ತು ಸ್ಥಳದಲ್ಲಿ, ಅವರ ಜೀವನ ವಿಧಾನಗಳಲ್ಲಿ, ಅವರ ಮತಪ್ರಚಾರ ಕಾರ್ಯಗಳ ಸ್ವರೂಪ ಮತ್ತು ವಿವರಣೆಗಳಲ್ಲಿ, ಅವರ ಸೋಲು-ಗೆಲುವಿನ ಶ್ರೇಣಿ ಮತ್ತು ಪ್ರಮಾಣಗಳಲ್ಲಿ, ನೈಜ ಸಂಗತಿಗಿಂತಲೂ ಹೆಚ್ಚು ಊಹಾಪೋಹಗಳೇ ತುಂಬಿಕೊಂಡಿವೆ. ಮಾ-ತ್ರವಲ್ಲದೆ ಅವರ ಜೀವನಶೈಲಿ ಮತ್ತು ಮತಪ್ರಚಾರ ಕಾರ್ಯಗಳನ್ನು ಸಮಗ್ರವಾಗಿ ಅಥವಾ ಕರಾರುವಾ-ಕ್ಕಾಗಿ ಚಿತ್ರೀಕರಿಸುವುದು ಕೂಡ ಅಸಾಧ್ಯವಾಗಿದೆ. ಆದರೆ ಮುಹಮ್ಮದ್(ಸ) ಇದಕ್ಕೆ ಭಿನ್ನರಾಗಿದ್ದಾರೆ.




ಮಾನವ ಕಲ್ಪನೆ ಮತ್ತು ವರ್ತನೆಗಳ ವಿವಿಧ ಸ್ತರಗಳಲ್ಲಿ ಮಾನವೇತಿಹಾಸದ ಪುಟಗಳಲ್ಲಿ ಅವರು ಪೂರ್ಣಚಂದ್ರನಂತೆ ಪ್ರಜ್ವಲಿಸುತ್ತಾರೆ. ಅವರ ಚಿತ್ರವನ್ನಾಗಲಿ, ಪ್ರತಿಮೆಯನ್ನಾಗಲಿ ಜಗತ್ತಿನ ಯಾವುದೇ ಮೂಲೆಯಲ್ಲೂ ಕಾಣಲು ಸಾಧ್ಯವಿಲ್ಲ!

ಅವರ ಅತ್ಯಂತ ವೈಯಕ್ತಿಕ ಕೆಲಸಗಳಿಂದ ತೊಡಗಿ ಅವರ ಸಾರ್ವಜನಿಕ ಸಂಭಾಷಣೆಗಳ ತನಕ, ಎಲ್ಲವನ್ನೂ ಅತಿಸುರಕ್ಷಿತವಾಗಿ ಮತ್ತು ಅತ್ಯಂತ ವಿಶ್ವಾಸಾರ್ಹವಾಗಿ ಇಂದಿನವರೆಗೂ ಸಂರಕ್ಷಿಸಿಡಲಾಗಿದೆ. ಹೀಗೆ ಸಂರಕ್ಷಿಸಿಡಲಾದ ದಾಖಲೆಗಳು ಅಧಿಕೃತವೆಂದು ಅವರ ಅನುಯಾಯಿಗಳು ಮಾತ್ರವಲ್ಲದೆ, ಅವರ ಕಡು ವಿಮರ್ಶಕರು ಕೂಡ ಒಪ್ಪುತ್ತಾರೆ. ಮಾನವ ಸ್ವಭಾವದ ಸರ್ವ ಅನುಕರಣೀಯ ಮಾದರಿಗಳೂ ಅವರಲ್ಲಿ ಪ್ರಚಂಡ ವೈಭವದೊಂದಿಗೆ ಹೊಳೆಯುತ್ತಿದ್ದವು.

ಮುಹಮ್ಮದ್(ಸ) ಒಬ್ಬ ಧಾರ್ಮಿಕ ಶಿಕ್ಷಕ, ಸಮಾಜ ಸುಧಾರಕ, ನ್ಯಾಯ ನೀತಿಯ ಮಾರ್ಗದರ್ಶಕ, ಆಡಳಿತಗಾರ, ಪ್ರಾಮಾಣಿಕ ಗೆಳೆಯ, ಅದ್ಭುತ ಸಂಗಡಿಗ, ತ್ಯಾಗ ಮನೋಭಾವದ ಪತಿ, ಪ್ರೀತಿ-ವಾತ್ಸಲ್ಯ ತುಂಬಿದ ತಂದೆ— ಎಲ್ಲವೂ ಆಗಿದ್ದರು. ಜೀವನದ ಈ ವಿಭಿನ್ನ ಮಗ್ಗಲುಗಳಲ್ಲಿ ಅವರನ್ನು ಮೀರಿದ ಅಥವಾ ಅವರಿಗೆ ಸರಿಸಮಾನರಾದ ಇನ್ನೊಬ್ಬ ವ್ಯಕ್ತಿ ಮಾನವ ಚರಿತ್ರೆಯಲ್ಲಿಲ್ಲ. ಅವರಿಗಿದ್ದ ನಿಸ್ವಾರ್ಥ

ಮನೋಭಾವವೇ ಇಂತಹ ನಂಬಲಸಾಧ್ಯವಾದ ಸಮಗ್ರತೆಯನ್ನು ಸಾಧಿಸಲು ಪ್ರಮುಖ ಕಾರಣವಾಗಿತ್ತು.


ಮಹಾತ್ಮ ಗಾಂಧಿ, ಮುಹಮ್ಮದ್(ಸ) ರ ವ್ಯಕ್ತಿತ್ವದ ಬಗ್ಗೆ ಮಾತನಾಡುತ್ತಾ 'ಯಂಗ್ ಇಂಡಿಯಾ'ದಲ್ಲಿ ಹೀಗೆ ಬರೆಯುತ್ತಾರೆ: "ಮಾನವ ಸಮೂಹದ ಕೋಟ್ಯಂತರ ಹೃದಯಗಳಲ್ಲಿ ವಿವಾದರಹಿತವಾಗಿ ಪ್ರಭುತ್ವ ಸ್ಥಾಪಿಸಿದ ಒಬ್ಬ ಅತ್ಯುನ್ನತ ವ್ಯಕ್ತಿಯ ಬಗ್ಗೆ ತಿಳಿಯಬಯಸಿದ್ದೆ... ಅಂದಿನ ಜೀವನ ರಂಗದಲ್ಲಿ ಇಸ್ಲಾಮಿಗೆ ಸ್ಥಾನವನ್ನು ಗಳಿಸಿಕೊಟ್ಟದ್ದು ಖಡ್ಗವಲ್ಲ, ಬದಲಾಗಿ ಪ್ರವಾದಿಯ ತೀವ್ರ ನಿರಾಡಂಬರತೆ, ಸಂಪೂರ್ಣ ನಿಷ್ಕಾಪಟ್ಯತೆ, ವಾಗ್ದಾನಗಳ ಬಗ್ಗೆ ಆತ್ಯಂತಿಕ ನಿಷ್ಠೆ, ಸ್ನೇಹಿತರು ಮತ್ತು ಅನುಯಾಯಿಗಳಿಗೆ ಅವರು ನೀಡುತ್ತಿದ್ದ ತೀವ್ರ ಪರಿಗಣನೆ, ಧರ್ಮಪ್ರಚಾರ ಕಾರ್ಯದ ಬಗ್ಗೆ ಅವರಿಗಿದ್ದ ಎದೆಗಾರಿಕೆ, ನಿರ್ಭೀತಿ ಮತ್ತು ದೇವನಲ್ಲಿದ್ದ ಸಂಪೂರ್ಣ ನಂಬಿಕೆ ಹಾಗೂ ಭರವಸೆಗಳಾಗಿದ್ದವು ಎಂಬ ವಾಸ್ತವವನ್ನು ನಾನು ಚೆನ್ನಾಗಿ ಮನದಟ್ಟುಮಾಡಿಕೊಂಡೆ. ಅವರ ಮುಂದಿದ್ದ



ಸರ್ವ ಅಡೆತಡೆಗಳನ್ನು ನಿವಾರಿಸಿದ ಅಸ್ತ್ರ ಇವುಗಳಾಗಿದ್ದವೇ ಹೊರತು ಖಡ್ಗವಾಗಿರಲಿಲ್ಲ. ನಾನು (ಪ್ರವಾದಿ ಜೀವನಚರಿತ್ರೆಯ) ಎರಡನೇ ಭಾಗವನ್ನು ಓದಿ ಮುಚ್ಚಿದಾಗ, ಆ ಶ್ರೇಷ್ಠ ಜೀವನದ ಬಗ್ಗೆ ಇನ್ನೇನೂ ಓದಲು ಉಳಿದಿಲ್ಲವೆಂದು ಮರುಗಿದ್ದೆ.” (Young India, September 23, 1924)

ಥಾಮಸ್ ಕಾರ್ಲೈಲ್ ತಮ್ಮ ‘ಹೀರೋಸ್ & ಹೀರೋ ವರ್ಷಿಪ್’ ಕೃತಿಯಲ್ಲಿ, “ಒಬ್ಬ ವ್ಯಕ್ತಿ ಒಂಟಿಯಾಗಿ ಯುದ್ಧನಿರತ ಜನಾಂಗಗಳನ್ನೂ, ಅಲೆಮಾರಿ ಅರಬಿಗಳನ್ನೂ ಎರಡು ದಶಕಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಒಂದು ಸುದೃಢ ಮತ್ತು ಸುಸಂಸ್ಕೃತ ರಾಷ್ಟ್ರವನ್ನಾಗಿ ಪರಿವರ್ತಿಸಿದ್ದು ಹೇಗೆ?” ಎಂದು ಅಚ್ಚರಿಪಡುತ್ತಾರೆ.

ಕಾರ್ಲೈಲ್ ಮುಂದುವರಿಯುತ್ತಾ ಮುಹಮ್ಮದ್(ಸ)ರ ವ್ಯಕ್ತಿತ್ವದ ಬಗ್ಗೆ ಹೀಗೆ ಹೇಳುತ್ತಾರೆ: “ಮುಹಮ್ಮದ್(ಸ) ರೋಗಿಗಳನ್ನು ಸಂದರ್ಶಿಸುತ್ತಿದ್ದರು, ಮೃತದೇಹವನ್ನು ಹೊತ್ತೊಯ್ಯುವುದನ್ನು ಕಂಡರೆ



ಅದನ್ನು ಹಿಂಬಾಲಿಸುತ್ತಿದ್ದರು, ಗುಲಾಮರು ಔತಣಕ್ಕೆ ಕರೆದರೆ ಅವರ ಆಮಂತ್ರಣವನ್ನು ಸ್ವೀಕರಿಸುತ್ತಿದ್ದ-ರು, ತಮ್ಮ ಅಂಗಿಗಳನ್ನು ತಾವೇ ಹೊಲಿಯುತ್ತಿದ್ದರು, ಆಡುಗಳ ಕೆಚ್ಚಲನ್ನು ತಾವೇ ಹಿಂಡುತ್ತಿದ್ದರು ಮತ್ತು ತಾವೇ ಅವುಗಳನ್ನು ಮೇಯಿಸುತ್ತಿದ್ದರು. ಇನ್ನೊಂದು ವರದಿ (ಹದೀಸ್) ಹೀಗೆನ್ನುತ್ತದೆ: ಯಾರಾದರೂ ಹಸ್ತಲಾಘವ ಮಾಡಿದರೆ ಆ ವ್ಯಕ್ತಿ ತನ್ನ ಕೈಯನ್ನು ಹಿಂದಕ್ಕೆಳೆಯುವವರೆಗೆ ಅವರು ತಮ್ಮ ಕೈಯನ್ನು ಹಿಂದೆಳೆಯುತ್ತಿರಲಿಲ್ಲ. ಆ ವ್ಯಕ್ತಿ ತಮ್ಮ ಬಳಿಯಿಂದ ಹೊರಡುವವರೆಗೆ ಅವರು ಅಲ್ಲಿಂದ ಕದಲುತ್ತಿರ-ಲಿಲ್ಲ. ಅವರ ಕುಟುಂಬವು ಅತ್ಯಂತ ಮಿತವ್ಯಯಿ-ಯಾಗಿತ್ತು; ಗಂಜಿ, ರೊಟ್ಟಿ ಮತ್ತು ನೀರೇ ಅವರ ದೈನಂದಿನ ಆಹಾರ. ಕೆಲವೊಮ್ಮೆ ಅವರ ಮನೆಯ ಒಲೆಯಲ್ಲಿ ತಿಂಗಳುಗಟ್ಟಲೆ ಬೆಂಕಿ ಉರಿಯುತ್ತಿರ-ಲಿಲ್ಲ. ಅವರ ಬಟ್ಟೆಗಳನ್ನು ಅವರೇ ಹೊಲಿಯು-ತ್ತಿದ್ದರು, ಅವರ ಚಪ್ಪಲಿಗಳನ್ನು ಅವರೇ ಸರಿಪಡಿ-ಸುತ್ತಿದ್ದರು, ಅವರ ಹರಿದ ಅಂಗಿಯನ್ನು ಅವರೇ ತೇಪೆ ಹಚ್ಚುತ್ತಿದ್ದರೆಂದು ಅವರ ಅನುಯಾಯಿಗ-ಳು ಬಹಳ ಹೆಮ್ಮೆಯಿಂದ ದಾಖಲಿಸಿದ್ದಾರೆ. ಅವರು ಸಾಮಾನ್ಯ ಜನರು ಕಷ್ಟಪಡುವಂತೆ ಕಷ್ಟಪಡುವ ಒಬ್ಬ ಬಡವ, ಕಠಿಣ ಪರಿಶ್ರಮಿ ಮತ್ತು ಸವಲತ್ತು-ಗಳಿಲ್ಲದ ವ್ಯಕ್ತಿಯಾಗಿದ್ದರು… ಸ್ವತಃ ತೇಪೆ ಹಚ್ಚಿದ ಬಟ್ಟೆಯನ್ನು ಧರಿಸಿದ ಈ ವ್ಯಕ್ತಿಯನ್ನು ಅನುಸರಿಸಿ-



ದಂತೆ ಜಗತ್ತಿನ ಇನ್ನಾವುದೇ ಮಹಾನ್ ಸಾಮ್ರಾಟನನ್ನೂ ಜನರು ಅನುಸರಿಸಿಲ್ಲ.” (Heroes and Hero Worship, 1840)

ಎಡ್ವರ್ಡ್ ಗಿಬ್ಬನ್ ಮತ್ತು ಸೈಮನ್ ಓಕ್ಲಿ ಹೇಳುತ್ತಾರೆ: “ನಾನು ಏಕದೇವನಲ್ಲಿ ವಿಶ್ವಾಸವಿಟ್ಟಿದ್ದೇನೆ ಮತ್ತು ಮುಹಮ್ಮದ್(ಸ) ದೇವನ ಸಂದೇಶವಾಹಕರೆಂದು ವಿಶ್ವಾಸವಿಟ್ಟಿದ್ದೇನೆ— ಇದು ಇಸ್ಲಾಮಿನ ಸರಳ ಮತ್ತು ಸ್ಥಿರ ಪ್ರಕಟನೆಯಾಗಿದೆ. ದೇವನ ಬೌದ್ಧಿಕ ರೂಪವನ್ನು ಯಾವುದೇ ಪ್ರತ್ಯಕ್ಷ ಪ್ರತಿಮೆಗಳ ರೂಪದಲ್ಲಿ ಹೀನಾಯಿಸಲಾಗಿಲ್ಲ. ಪ್ರವಾದಿಯ ಗೌರವವು ಮಾನವ ಸಂಪನ್ನತೆಯ ಮಿತಿಯನ್ನು ಮೀರಿಲ್ಲ. ಅವರ ಜೀವಂತ ನಿಯಮ ನಿರ್ದೇಶನಗಳು ವಿವೇಚನಾಶಕ್ತಿ ಮತ್ತು ಧರ್ಮದ ಚೌಕಟ್ಟಿನೊಳಗೆ ಅವರ ಶಿಷ್ಯರ ಕೃತಜ್ಞತೆಯನ್ನು ಸಂರಕ್ಷಿಸಿದೆ.” (Edward Gibbon and Simon Ockley, History of the Saracen Empires, London, 1870. p. 54)

ಮುಹಮ್ಮದ್(ಸ) ಒಬ್ಬ ಮನುಷ್ಯರಲ್ಲದೆ ಇನ್ನೇನೂ ಆಗಿರಲಿಲ್ಲ. ಅವರೊಂದು ಉದಾತ್ತ ಧರ್ಮದ ಪ್ರಚಾರಕರಾಗಿದ್ದರು. ಹೆಚ್ಚಿನ ಜನರು ಅಪಾರ್ಥಮಾಡಿಕೊಂಡಂತೆ ಅದು ಅವರು ಸಂಶೋಧಿಸಿದ ಧರ್ಮವಲ್ಲ; ಬದಲಾಗಿ ಅವರಿಗಿಂತ ಮೊದಲು ಬಂದ ಪ್ರವಾದಿಗಳೆಲ್ಲರೂ ಅದೇ ಧರ್ಮವನ್ನು ಬೋಧಿಸಿ-

ದ್ದರು. ಎಲ್ಲಾ ಪ್ರವಾದಿಗಳೂ ತಮ್ಮ ಜನತೆಗೆ ಬೋಧಿಸಿದಂತೆ ಅವರೂ 'ಏಕೈಕನಾದ ದೇವನನ್ನು ಮಾತ್ರ ಆರಾಧಿಸಬೇಕು, ಅವನಲ್ಲಿ ಮಾತ್ರ ಪ್ರಾರ್ಥಿಸಬೇಕು, ಅವನ ನಿಯಮ ನಿರ್ದೇಶನದ ಪ್ರಕಾರ ಬದುಕನ್ನು ಸರಿಪಡಿಸಿ ಮುನ್ನಡೆಸಬೇಕು' ಎಂದು ಬೋಧಿಸಿದ್ದರು.

ಭಾರತದ ಪ್ರಸಿದ್ಧ ಕವಯಿತ್ರಿ ಸರೋಜಿನಿ ನಾಯ್ಡು, ಇಸ್ಲಾಮಿನಲ್ಲಿ ದೇವನ ಮುಂದೆ ನಿಲ್ಲುವ 'ಸಮಾನತೆ'ಯ ನೋಟವನ್ನು ವೀಕ್ಷಿಸುತ್ತಾ ಹೀಗೆ ಹೇಳುತ್ತಾರೆ: "ಇಸ್ಲಾಮ್ ಪ್ರಜಾಪ್ರಭುತ್ವವನ್ನು ಬೋಧಿಸಿ ಕಾರ್ಯರೂಪಕ್ಕೆ ತಂದ ಪ್ರಪ್ರಥಮ ಧರ್ಮವಾಗಿದೆ. ಮಸೀದಿಯಿಂದ ಪ್ರಾರ್ಥನೆಗೆ ಕರೆ ನೀಡುವಾಗ ಭಕ್ತರೆಲ್ಲರೂ ಸಾಲುಸಾಲಾಗಿ ಸೇರಿ, ರೈತ-ರಾಜನೆಂಬ ವ್ಯತ್ಯಾಸವಿಲ್ಲದೆ ಭುಜಕ್ಕೆ ಭುಜ ಸೇರಿಸಿ, ದೇವನ ಮುಂದೆ ಸಾಷ್ಟಾಂಗವೆರಗುತ್ತಾ 'ದೇವನೊಬ್ಬನೇ




ದೊಡ್ಡವನು' ಎನ್ನುವಾಗ ಇಸ್ಲಾಮಿನ ಪ್ರಜಾಪ್ರಭುತ್ವವು ದಿನಕ್ಕೆ ಐದು ಬಾರಿ ಪ್ರಕಟವಾಗುತ್ತದೆ. ಮನುಷ್ಯನನ್ನು ಜನ್ಮತಃ ಸಹೋದರರನೆಂದು ಪರಿಗಣಿಸುವ ಇಸ್ಲಾಮಿನ ಈ ಅವಿಭಾಜ್ಯ ಐಕ್ಯತೆಯು ನನ್ನನ್ನು ಪದೇ ಪದೇ ದಿಗ್ಭ್ರಮೆಗೊಳಿಸುತ್ತಿದೆ." (S. Naidu, Ideals of Islam, vide speaches and writings, Madras, 1918, p 169)

ಪ್ರೊಫೆಸರ್ ಹರ್ಗ್ರೋಂಜೆ (Prof. Hurgronje) ಹೇಳುತ್ತಾರೆ: "ಇಸ್ಲಾಮಿನ ಪ್ರವಾದಿಯಿಂದ ಸಂಶೋಧಿಸಲ್ಪಟ್ಟ ರಾಷ್ಟ್ರಗಳ ಒಕ್ಕೂಟವು, ಇತರ ರಾಷ್ಟ್ರಗಳಿಗೆ ಬೆಳಕು ತೋರುವ ಅಂತಹ ಜಾಗತಿಕ ಪ್ರತಿಷ್ಠಾನಗಳಿಗೆ ಅಂತರರಾಷ್ಟ್ರೀಯ ಐಕ್ಯತೆ ಮತ್ತು ಮಾನವ ಭ್ರಾತೃತ್ವದ ತತ್ವವನ್ನು ಕಲಿಸಿಕೊಟ್ಟಿತ್ತು... ರಾಷ್ಟ್ರಗಳ ಒಕ್ಕೂಟದ ಕಲ್ಪನೆಯನ್ನು ಸಾಧಿಸಲು ಇಸ್ಲಾಮ್ ಮಾಡಿದ್ದಕ್ಕೆ ಸಮಾನವಾದ ಒಂದು ಪ್ರಯತ್ನ ಮಾಡಲು ಜಗತ್ತಿನ ಯಾವುದೇ ರಾಷ್ಟ್ರಕ್ಕೆ ಸಾಧ್ಯವಿಲ್ಲವೆಂಬುದು ವಾಸ್ತವವಾಗಿದೆ."

ತಮ್ಮ ಜೀವನಶೈಲಿ ಮತ್ತು ಬೋಧನೆಗಳು ಇತಿಹಾಸದ ಗರ್ಭದಲ್ಲಿ ಹುದುಗಿ ಹೋದ ವ್ಯಕ್ತಿಗಳನ್ನು ದೈವತ್ವಕ್ಕೇರಿಸಲು ಜಗತ್ತು ಒಮ್ಮೆಯೂ ನಿರಾಕರಿಸಿಲ್ಲ. ಈ ಎಲ್ಲಾ ಜನರು ಮುಹಮ್ಮದ್(ಸ) ಸಾಧಿಸಿದ ಒಂದಂಶವನ್ನಾದರೂ ಸಾಧಿಸಿಲ್ಲವೆನ್ನುವುದು ಐತಿಹಾಸಿಕ ಸತ್ಯ. ಮುಹಮ್ಮದ್(ಸ) ರ ಪ್ರತಿಯೊಂದು

ಶ್ರಮವೂ ಮನುಷ್ಯರನ್ನು ಏಕದೇವಾರಾಧನೆಯೆಡೆಗೆ ಮತ್ತು ದೈವಿಕ ಶಾಸನಗಳಿಗೆ ವಿಧೇಯರಾಗಿ ಪರಸ್ಪರ ಸಹೋದರರಾಗಿ ಬದುಕುವಂತೆ ಮಾಡುವ ಏಕೈಕ ಉದ್ದೇಶದಿಂದ ಕೂಡಿತ್ತು. ಅವರೆಂದೂ ತಮ್ಮನ್ನು ದೇವಪುತ್ರರೆಂದೋ, ದೇವಾವತಾರವೆಂದೋ, ದೇವಮಾನವನೆಂದೋ ವಾದಿಸಿಲ್ಲ; ಅವರ ಅನುಚರರೂ ಅವರನ್ನು ಆ ರೀತಿ ಪರಿಗಣಿಸಿಲ್ಲ. ಅವರು ಅಂದೂ ಇಂದೂ ದೇವಸಂದೇಶವಾಹಕ (Messenger of God) ಎಂದೇ ಪರಿಗಣಿಸಲ್ಪಟ್ಟಿದ್ದಾರೆ.

ಮೈಕಲ್ ಎಚ್. ಹಾರ್ಟ್, ಮಾನವ ಕಲ್ಯಾಣಕ್ಕಾಗಿ ಶ್ರಮಿಸಿದವರನ್ನು ಪರಸ್ಪರ ತುಲನೆ ಮಾಡಿ, ಮುಹಮ್ಮದ್(ಸ) ರಿಗೆ ಮೊಟ್ಟಮೊದಲ ಸ್ಥಾನವನ್ನು ನೀಡುತ್ತಾರೆ. ನಂತರ ಅದಕ್ಕಿರುವ ಕಾರಣವನ್ನು ವಿವರಿಸಿ ಹೇಳುತ್ತಾರೆ: “ಜಗತ್ತಿನ ಅತಿಪ್ರಭಾವಶಾಲಿ ಜನರ ಯಾದಿಯಲ್ಲಿ ನಾನು ಮುಹಮ್ಮದ್(ಸ) ರ ಹೆಸರನ್ನು ಮೊಟ್ಟಮೊದಲು ಸೂಚಿಸಿರುವುದು ಅನೇಕರನ್ನು ವಿಸ್ಮಯಗೊಳಿಸಬಹುದು ಮತ್ತು ಇತರರನ್ನು ಪ್ರಶ್ನಿಸುವಂತೆ ಮಾಡಬಹುದು. ಆದರೆ ಇತಿಹಾಸದಲ್ಲಿ




ಧಾರ್ಮಿಕ ಮತ್ತು ಲೌಕಿಕ (secular) ಮಟ್ಟಗಳಲ್ಲಿ ಪೂರ್ಣ ಯಶಸ್ಸು ಸಾಧಿಸಿದ್ದು ಅವರೊಬ್ಬರೇ ಆಗಿದ್ದಾರೆ." (M. H. Hart, The 100: A Ranking of the Most Influential Persons in History, New York, 1978, pp. 33)

ಇಂದು ಹದಿನಾಲ್ಕು ಶತಮಾನಗಳ ಬಳಿಕವೂ ಮುಹಮ್ಮದ್(ಸ) ರ ಜೀವನಶೈಲಿ ಮತ್ತು ಬೋಧನೆಗಳು ಯಾವುದೇ ಮಾರ್ಪಾಡುಗಳಿಲ್ಲದೆ, ತಿದ್ದುಪಡಿಗೊಳಗಾಗದೆ ಅಂದಿನ ಅದೇ ರೂಪದಲ್ಲಿ ಸಂರಕ್ಷಿಸಲ್ಪಟ್ಟಿವೆ. ಅವರು ಜೀವಂತವಿದ್ದಾಗ ಆ ಬೋಧನೆಗಳಿಂದ 'ಮನುಷ್ಯಕಾಯಿಲೆ'ಗಳು ದೂರವಾದಂತೆ, ಇಂದೂ ಸಹ ಅದು ಅಷ್ಟೇ ಭರವಸೆಯನ್ನು ಹೊಂದಿದೆ. ಇದು ಮುಹಮ್ಮದ್(ಸ) ರ ಅನುಯಾಯಿಗಳ ವಾದವಲ್ಲ, ಬದಲಾಗಿ ಇತಿಹಾಸದಿಂದ ಸಾಬೀತಾದ ವಾಸ್ತವ ಸಂಗತಿಯಾಗಿದೆ.

ಕಳೆದ ಹದಿನಾಲ್ಕು ನೂರು ವರ್ಷಗಳಿಂದ ಕೋಟ್ಯಂತರ ಜನರ ಹೃದಯದ ಮೇಲೆ ಪರಿವರ್ತನೆಯ ಪ್ರಭಾವವನ್ನು ಬೀರಿದ ಆ ಮಹಾನ್ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳುವ ಸರದಿ ಈಗ ನಿಮ್ಮದು. ನೀವು ಅದಕ್ಕೆ ಸಿದ್ಧರೆಂದಾದರೆ, ಖಂಡಿತವಾಗಿಯೂ ಅದು ನಿಮ್ಮ ಬದುಕನ್ನೇ ಪರಿವರ್ತಿಸಬಹುದು.

ಓದುಗರಲ್ಲಿ ವಿನಂತಿ

ಈ ಲೇಖನವು ನಿಮಗೆ ಇಷ್ಟವಾದರೆ, ದಯವಿಟ್ಟು ಇದನ್ನು ನಿಮ್ಮ ಗೆಳೆಯರು ಮತ್ತು ಸಂಬಂಧಿಕರಿಗೆ ಫಾರ್ವರ್ಡ್ ಮಾಡಿ



ಈ ಲೇಖನವನ್ನು ಕರಪತ್ರದ ರೂಪದಲ್ಲಿ ಮುದ್ರಿಸಲು ಅಥವಾ ಇಂತಹ ಲೇಖನಗಳನ್ನು ತಯಾರಿಸಿ ಪ್ರಕಟಿಸಲು ಸಂಪರ್ಕಿಸಿ

9972343115

ಕರೆ ಮಾಡಲು ಸಂಖ್ಯೆಯನ್ನು ಒತ್ತಿದರೆ ಸಾಕು - ನಿಮ್ಮ ಫೋನ್ ಸ್ಕ್ರೀನ್ ತೆರೆದುಕೊಳ್ಳುತ್ತದೆ